# ರಾಜ್ ಕುರಿತ ಕವನ ಅವರೆದುರೇ ವಾಚಿಸಿದ ಖುಷಿ!

ರಾಜ್‌ಕುಮಾರ್ ಬಗ್ಗೆ ನಾನು ಬರೆದ ಕವನವನ್ನು ಕಿಕ್ಕಿರಿದ ಸಮಾರಂಭದಲ್ಲಿ ವಾಚಿಸಲು ಸಿಕ್ಕಿದ ಅವಕಾಶ ಹಾಗೂ ರಾಜ್ ದಂಪತಿಗಳಿಂದ 'ಚೆನ್ನಾಗಿ ಕವನ ಬರೆದಿದ್ದೀಯಾ' ಎಂದು ಹೊಗಳಿಸಿಕೊಂಡದ್ದು ಜೀವಮಾನದಲ್ಲಿ ಎಂದೂ ಮರೆಯಲಾರದ ಸವಿನೆನಪು.

**ಬಿ. ಸಂತೋಷ ಕುಮಾರಿ, ಹಾಸನ**



**ಕರುನಾಡ ಜನನಿಯ ಹೆಮ್ಮೆಯ ಕುವರ**
**ಕಲಾ ಸಿರಿವಂತಿಕೆಯ ಆಗರ**
**ಸಾಧು ಸಜ್ಜನಿಕೆಯ ಗಿರಿಶಿಖರ**
**ಕನ್ನಡಿಗರ ಹೆಮ್ಮೆಯ 'ರಾಜಕುಮಾರ'**

ಸಿನಿಮಾ ರಂಗದ ಮೇರು ಶಿಖರ ರಾಜ್‌ಕುಮಾರ್ ಬಗ್ಗೆ ನಾನು ಬರೆದ ಕವನದ ಪಲ್ಲವಿ ಇದು. ಇದನ್ನು ಹೊರತುಪಡಿಸಿ ಇನ್ನೂ ಎಂಟು ಚರಣಗಳಿರುವ ರಾಜಕುಮಾರ್ ಕುರಿತ ಈ ಕವನ ವರನಟನ ಸಾಧನೆಯ ಹಿನ್ನೆಲೆಯಲ್ಲೇ ಪ್ರೀತಿ ಅಭಿಮಾನದಿಂದ ಬರೆದಿದ್ದೆ.

ಜೀವನವೆಂಬ ಶರಧಿಯಲ್ಲಿ ಭೋರ್ಗರಿಸುವವು ನೆನಪುಗಳು. ಅಲೆಯೋಪಾದಿಯಲ್ಲಿ ಘಟಿಸಿ ಹೋದ ಸಂತಸದ ಕ್ಷಣಗಳ ಅನುಭವಿಸುವ ಅವಕಾಶಗಳೇ ಸವಿ ಸವಿ ನೆನಪುಗಳು. ಕನ್ನಡ ಸಿನಿಮಾ ಕ್ಷೇತ್ರದ ನಟಸಾರ್ವಭೌಮ ರಾಜ್‌ಕುಮಾರ್‌ರವರ ಕುರಿತು ಬರೆದಂತಹ ಕವನವನ್ನು ವೇದಿಕೆಯಲ್ಲಿ ಅವರ ಮುಂದೆ ವಾಚನ ಮಾಡಿದ ಅಮೂಲ್ಯ ಘಳಿಗೆ ನನ್ನ ಜೀವನವೆಂಬ ಹೊತ್ತಗೆಯ ಅತ್ಯಮೂಲ್ಯ ನೆನಪಿನ ಪುಟವಾಗಿ ಮನದಾಳದಲ್ಲಿ ಅಚ್ಚೊತ್ತಿದೆ.

ಸುಮಾರು 22 ವರ್ಷಗಳ ಹಿಂದೆ ಅಂದರೆ 1996ರಲ್ಲಿ ತಿಪಟೂರಿನ 'ಕನ್ನಡ ಶಕ್ತಿ ಕೇಂದ್ರ'ದವರು ಏರ್ಪಡಿಸಿದ್ದ 'ಫಾಲ್ಕೆ ಪ್ರಶಸ್ತಿ ವಿಜೇತ ರಾಜ್' ಕುರಿತಾದ ರಾಜ್ಯಮಟ್ಟದ ಕವನ ಸ್ಪರ್ಧೆಯಲ್ಲಿ ಬಹುಮಾನ ಬಂದಿತ್ತು. 96ರ ಅಕ್ಟೋಬರ್ 28ರಂದು ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಚಲನಚಿತ್ರ ನಟ ಜಗ್ಗೇಶ್‌ರವರಿಂದ ಬಹುಮಾನ ಸ್ವೀಕರಿಸಿದೆ. ಅಲ್ಲಿ ಕವನ ವಾಚನಕ್ಕೆ ಅವಕಾಶವು ಸಿಕ್ಕಿತ್ತು. ಸಮಾರಂಭದಲ್ಲಿ ಉಪಸ್ಥಿತರಿದ್ದ ರಾಜ್ ಅಭಿಮಾನಿ ಸಂಘದ ಅಧ್ಯಕ್ಷರಾದ ಸಾ.ರಾ. ಗೋವಿಂದು ಅವರು ರಾಜ್ ಅವರಿಗೆ ತಲುಪಿಸುವೆ ಎಂದು ಹೇಳಿ ಕವನದ ಪ್ರತಿಯನ್ನು ಕೇಳಿದ್ದರು.

ನಂತರ ಡಿಸೆಂಬರ್ ತಿಂಗಳಲ್ಲಿ ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷರಾದ ದಯಾನಂದ ಸಾಗರ್ ಅವರು ತುಮಕೂರಿನಲ್ಲಿ ರಾಜ್‌ರವರಿಗೆ ಸನ್ಮಾನ ಸಮಾರಂಭವಿದೆ; ಅಲ್ಲಿ ನಿಮಗೆ ಕವನ ವಾಚನಕ್ಕೆ ಅವಕಾಶ ನೀಡಲಾಗಿದೆ ಎಂಬ ಆಹ್ವಾನವಿತ್ತರು. ಆಗ ನನಗಾದ ಸಂತಸ ವರ್ಣಿಸಲಸಾಧ್ಯ. ಏಕೆಂದರೆ ಅಂತಹ ಮೇರುನಟನನ್ನು ನೋಡುವ ಹಾಗೂ ಅವರ ಮುಂದೆ ವೇದಿಕೆಯಲ್ಲಿ ಕವನ ವಾಚನ ಮಾಡುವ ಅವಕಾಶ ಲಭಿಸಿದ್ದು ನನಗೆ ಅನಿರೀಕ್ಷಿತವಾಗಿ ಬಂದ ಭಾಗ್ಯ.

1996ರ ಡಿಸೆಂಬರ್ 29ರಂದು ಸಂಜೆ ತುಮಕೂರಿನ ವಿಶಾಲ ಮೈದಾನದಲ್ಲಿ ರಾಜ್ ಸನ್ಮಾನ ಸಮಾರಂಭ ಏರ್ಪಾಡಾಗಿತ್ತು. ಜನಸಾಗರವೇ ಅಲ್ಲಿಗೆ ಹರಿದು ಬಂದಿತ್ತು. ವೇದಿಕೆಯಲ್ಲಿ ರಾಜ್‌ರವರ ಮುಂದೆ ಆ ಕವನವನ್ನು ಹುಮ್ಮಸ್ಸಿನಿಂದಲೇ ವಾಚಿಸಿದೆ. ಕವನದ ಪ್ರತಿಯನ್ನು ಸ್ಮರಣೀಯ ರೂಪದಲ್ಲಿ ಅವರಿಗೆ ನೀಡಿ, ಕಾಲುಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದೆ.

ರಾಜ್ ದಂಪತಿಗಳು ವೇದಿಕೆಯಿಂದ ಇಳಿಯುವಾಗ ಅಲ್ಲಿಯೇ ಇದ್ದ ನನಗೆ, ಪಾರ್ವತಮ್ಮನವರು ಬೆನ್ನುತಟ್ಟಿ 'ಚೆನ್ನಾಗಿ ಬರೆದಿದ್ದೀಯಾ' ಎಂದದ್ದು, ಸರಳ ಸಜ್ಜನಿಕೆಯ ರಾಜ್ ಅವರು ಸಮೀಪ ಬಂದು 'ಚೆನ್ನಾಗಿ ಬರೆದಿರುವೆ' ಎಂದು ಕೈಮುಟ್ಟಿ ಆಶೀರ್ವದಿಸಿ ಹೇಳಿದ ಆ ಅಮೃತ ಘಳಿಗೆ ನನ್ನ ನೆನಪಿನ ಹಂದರದಲ್ಲಿ ನಿತ್ಯನೂತನವಾಗಿ ಉಳಿದಿದೆ.